ಕಾರ್ಖಾನೆಯು ಬಹು ರಾಜ್ಯಗಳ ಕಾಂಪ್ಲೆಂಯಡಿಯಲ್ಲಿ ನೊಂದಣಿಯಾಗಿರುವುದರಿಂದ ಸೆಂಟ್ರಲ್ ರಿಜಿಸ್ಟ್ರಾರ್ ಆಫ್ ಕೋ-ಆಪರಟಿವ್ ಸೋಸೈಟೀಸ್, ನವದೆಹಲಿ ಅವರ ವ್ಯಾಪ್ತಿಯಲ್ಲಿ ಬರುತ್ತದೆ. ಆದ್ದರಿಂದ ಆಡಿಟ್ ಆಕ್ಷೇಪಣೆಗಳಿಗೆ ಕುರಿತಂತೆ ಕೇಂದ್ರ ಸರ್ಕಾರದ ರಿಜಿಸ್ಟ್ರಾರ್ ಜನರಲ್‌ರವರಿಂದ ಮಾಹಿತಿಗಳನ್ನು ಪಡೆದುಕೊಳ್ಳಬೇಕು.

ಸಹಕಾರ ಸಂಘಗಳ ನಿಬಂಧಕರು, ಕರ್ನಾಟಕ ರಾಜ್ಯದವರು ತಮ್ಮ ಪತ್ರ ಸಂಖ್ಯೆ ಆರ್.ಸಿ.ಎಸ್.ಐ ಅಂಡ್ ಡಿ/೧೦/೨೦೦೫-೨೦೦೬ ದಿನಾಂಕ ೩-೬-೨೦೦೫ ರಂದು ಸೆಂಟ್ರಲ್ ರಿಜಿಸ್ಟ್ರಾರ್ ಆಫ್ ಕೋ ಆಪರೇಟಿವ್ ಸೊಸೈಟೀಸ್. ನವದೆಹಲಿರವರಿಗೆ ಈ ಕಾರ್ಖಾನೆಯ ವಿರುದ್ಧ ಅವ್ಯವಹಾರ ಕುರಿತು ಮಲ್ಟಿ ಸ್ಟೇಟ್ ಕೋ ಆಪರೇಟಿವ್ ಸೊಸೈಟೀಸ್ ಆಕ್ಟ್, ೨೦೦೨ರ ಕಲಂ ೭೮ರ ಪ್ರಕಾರ ತನಿಖೆ ಮಾಡಲು ಶಿಪಾರಸ್ಸು ಮಾಡಿರುತ್ತಾರೆ. ಅವರಿಂದ ತನಿಖೆಗೆ ಆದೇಶವಾದ ನಂತರ ಮುಂದಿನ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

೩೯೧೫ (೪೭೬೦) ಶ್ರೀ ಶಿವಾನಂದ ಎಸ್. ಪಾಟೀಲ್ (ಬಸವನಬಾಗೇವಾಡಿ) :- ಮಾನ್ಯ ಜವಳಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಿದ್ಯುತ್ ಮಗ್ಗಗಳೆಷ್ಟು; ಇವುಗಳಲ್ಲಿ (ಕಾರ್ಯ) ಸ್ಥಗಿತವಾಗಿರುವ ಮಗ್ಗಗಳೆಷ್ಟು;

ಆ) ಕೇಂದ್ರ ಸರ್ಕಾರದ ತಂತ್ರಜ್ಞಾನ ಉನ್ನತೀಕರಣ ಯೋಜನೆಯಲ್ಲಿ ಕರ್ನಾಟಕ ರಾಜ್ಯದಲ್ಲಿ ಆಧುನೀಕರಣಗೊಂಡ ಮಗ್ಗಗಳೆಷ್ಟು;

ಇ) ತಂತ್ರಜ್ಞಾನ ಉನ್ನತೀಕರಣ ಯೋಜನೆಯ ಅನುಷ್ಠಾನ ಕರ್ನಾಟಕ ರಾಜ್ಯದಲ್ಲಿ ವಿಳಂಬವಾಗುವುದಕ್ಕೆ ಕಾರಣಗಳೇನು; ಮತ್ತು ಈ ಸಂಬಂಧವಾಗಿ ಸರ್ಕಾರದಿಂದ ಕೈಗೊಂಡ ಕ್ರಮಗಳೇನು;

ಈ) ತಂತ್ರಜ್ಞಾನ ಉನ್ನತೀಕರಣ ಯೋಜನೆಯ ಸಾಫಲ್ಯ ಪೂರ್ಣ ಅನುಷ್ಠಾನಕ್ಕೆ ನಮ್ಮ ಸರ್ಕಾರದಿಂದ ಮಹರಾಷ್ಟ್ರ ಮಾದರಿಯಲ್ಲಿ ಉತ್ತೇಜನ ಕೊಡುವ ಪ್ರಸ್ತಾವನೆ ಇದೆಯೆ? (ಅಂದರೆ ವಿದ್ಯುತ್ ರಿಯಾಯಿತಿ, ಬಡ್ಡಿ ರಿಯಾಯಿತಿ, ಇತ್ಯಾದಿ)

ಶ್ರೀ ಸತೀಶ್ ಜಾರಕಿಹೊಳಿ (ಜವಳಿ ರಾಜ್ಯಸಚಿವರು) :

ಅ) ೧೯೯೫–೯೬ನೇ ಸಾಲಿನ ಗಣತಿಯ ಪ್ರಕಾರ ರಾಜ್ಯದಲ್ಲಿ ೮೮,೫೫೬ ವಿದ್ಯುತ್ ಮಗ್ಗಗಳಿದ್ದು. ಇದರಲ್ಲಿ ೪೮.೩೩೭ ಮಗ್ಗಗಳು ಕಾರ್ಯ ನಿರ್ವಹಿಸುತ್ತಿತ್ತು ಹಾಗೂ ೪೦೨೯ ಮಗ್ಗಗಳು ಸ್ಥಗಿತಗೊಂಡಿತ್ತು.

ಆ) ದಿನಾಂಕ : ೩೧–೩–೨೦೦೫ ರಲ್ಲಿದ್ದಂತೆ ರಾಜ್ಯದಲ್ಲಿ ೯೭ ಘಟಕಗಳನ್ನು (TUF) ತಂತ್ರಜ್ಞಾನ ಉನ್ನತೀಕರಣ ಯೋಜನೆಯಡಿ ಒಳಪಡಿಸಲಾಗಿದೆ.

ಇ) ದಿನಾಂಕ : ೩೧–೩–೦೫ ರಲ್ಲಿದ್ದಂತೆ ೧೨೦ ಫಲಾನುಭವಿಗಳಿಗೆ ರೂ.೩೯೬.೪೧ ಕೋಟಿ ಮಂಜೂರು ಮಾಡಲಾಗಿದೆ. ಇದರಲ್ಲಿ ೯೭ ಫಲಾನುಭವಿಗಳಿಗೆ ರೂ.೨೫೬.೭೮ ಕೋಟಿಹಣ ಬಿಡುಗಡೆ ಮಾಡಲಾಗಿದೆ. ಆದುದರಿಂದ, ಈ ಯೋಜನೆಯ ಅನುಷ್ಠಾನದಲ್ಲಿ ಪ್ರಗತಿ ಸಾಧಿಸಲಾಗಿದೆ.

ಈ) ಇಲ್ಲಾ.

೩೯೧೯ (೪೫೮೨) ಶ್ರೀ ಶ್ರೀನಿವಾಸ್ ಎಸ್.ಆರ್. (ಗುಬ್ಬಿ) :– ಮಾನ್ಯ ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಂಜುಂಡಪ್ಪನವರ ವರದಿಯ ಪ್ರಕಾರ ಗುಬ್ಬಿ ತಾಲ್ಲೂಕು ಹಿಂದುಳಿದ ತಾಲ್ಲೂಕು ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಈ ತಾಲ್ಲೂಕಿನ ಅಭಿವೃದ್ಧಿಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು;

ಇ) ಇಲ್ಲವಾದಲ್ಲಿ, ಸದರಿ ತಾಲ್ಲೂಕಿನ ಅಭಿವೃದ್ಧಿಗೆ ಸರ್ಕಾರ ಮುಂದಕ್ಕೆ ತೆಗೆದುಕೊಳ್ಳುವ ಕ್ರಮಗಳಾವುವು)?

ಶ್ರೀ ಪಿ.ಜಿ.ಆರ್. ಸಿಂಧ್ಯ (ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕೆಗಳು ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು) :

ಅ) ಹೌದು.

ಆ) ಯೋಜನೆಯಡಿ ವಿವಿಧ ಇಲಾಖೆಗಳಿಂದ ಡಾ॥ ನಂಜುಂಡಪ್ಪ ಸಮಿತಿ ವರದಿಯಲ್ಲಿ ಗುರುತಿಸಲಾದ ಅತ್ಯಂತ ಹಿಂದುಳಿದ ೩೯ ತಾಲ್ಲೂಕುಗಳಲ್ಲಿ ಕೈಗಾರಿಕಾಭಿವೃದ್ಧಿ ಕಾರ್ಯಕ್ರಮಗಳ ಯೋಜನೆಗಳನ್ನು ರೂಪಿಸಲಾಗುತ್ತಿದೆ. ಯೋಜನೆಗಳು